ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು):

ಅ) ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ರೂ.30.00 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ.

ಆ) 74 ಕೊಳವೆ ಬಾವಿಗಳನ್ನು ಕೊರೆಯಿಸಲಾಗಿದೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ವಿಷಯ: ಜಿಲ್ಲಾ ಪುನರ್ ವಿಂಗಡಣೆಯಲ್ಲಿ ಕಛೇರಿಗಳಿಗೆ ಸಿಬ್ಬಂದಿಗಳ ಆದ್ಯತೆ

2597 (3629)

ಶ್ರೀ ಅಶೋಕ್ ಕಾಟವೆ (ಹುಬ್ಬಳ್ಳಿ ನಗರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆ ಪುನರ್ ವಿಂಗಡಣೆಯ ಹಿನ್ನಲೆಯಲ್ಲಿ ಹಾವೇರಿ, ಗದಗ, ಅಂತಹ ಜಿಲ್ಲೆಗಳನ್ನು ಘೋಷಿಸಿದ್ದು, ಈ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ಕೆಲಸ ನಿರ್ವಹಿಸಲು ನಿಗಧಿತ ಪ್ರಮಾಣದಲ್ಲಿ ನುರಿತ ಸಿಬ್ಬಂದಿಯ ಲಭ್ಯವಿದೆಯೇ?

ಆ) ಇದ್ದಲ್ಲಿ ಅವರನ್ನು ಹಾವೇರಿ ಹಾಗೂ ಗದಗ ಜಿಲ್ಲೆಗಳಿಗೆ ಹೇಗೆ ನಿಯೋಜಿಸಲಾಗುವುದು.

ಇ) ಈಗ ಧಾರವಾಡ ಕಂದಾಯ ಕಚೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯನ್ನು ನಿಯೋಜಿಸಿದರೆ ಅವರು ತಮ್ಮ ಜ್ಯೇಷ್ಠತಾ ಪಟ್ಟಿಯಲ್ಲಿ ತಮ್ಮ ಜ್ಯೇಷ್ಠತೆಯನ್ನು ಕಳೆದುಕೊಳ್ಳುವುದಿಲ್ಲವೇ?

ಈ) ಧಾರವಾಡ ಮಲಪ್ರಭಾ ಭೂಸ್ವಾಧೀನ ಕಾರ್ಯಾಲಯ ರದ್ದು ಮಾಡಿ ಅಲ್ಲಿಯ ಸಿಬ್ಬಂದಿ ಗದಗ ಅಥವಾ ಹಾವೇರಿ ಜಿಲ್ಲೆಗಳಿಗೆ ನಿಯೋಜಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು):

ಅ) ಇದೆ.

ಆ) ವರ್ಗಾವಣೆ ಅಥವಾ ನಿಯೋಜನೆ ಮೂಲಕ

ಇ) ಹೊಸ ಜಿಲ್ಲೆಗಳಲ್ಲಿ ನೌಕರರ ಸೇವೆಯನ್ನು ಕ್ರಮಬದ್ಧಗೊಳಿಸುವ ಸಂದರ್ಭದಲ್ಲಿ ಜ್ಯೇಷ್ಠತೆ ಬಗ್ಗೆ ಪರಿಶೀಲಿಸಲಾಗುವುದು.

ಈ) ಮಲಪ್ರಭಾ ಭೂಸ್ವಾಧೀನ ಕಾರ್ಯಾಲಯದ ಕೆಲವು ಸಿಬ್ಬಂದಿಯನ್ನು ಗದಗ ಮತ್ತು ಹಾವೇರಿ ಜಿಲ್ಲೆಗೆ ನಿಯೋಜಿಸಲಾಗಿದೆ.

ವಿಷಯ: ಪರವಾನಿಗೆ ವಿರುದ್ಧ ಸಂಚರಿಸುವ ಖಾಸಗಿ ಬಸ್ಸುಗಳ ಮಾಲೀಕರ ಮೇಲೆ ಕ್ರಮ.

2588 (3879)

ಶ್ರೀ ಟಿ.ಹೆಚ್.ಬಸವರಾಜ್ (ಹೊಸದುರ್ಗ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸದುರ್ಗದಿಂದ ಬೆಂಗಳೂರಿಗೆ ಪ್ರತಿದಿನ ಬಂದು ಹೋಗುವ ಖಾಸಗೀ ಬಸ್ಸುಗಳ ಸಂಖ್ಯೆ ಎಷ್ಟು?

ಆ) ಸದರಿ ಬಸ್ಸುಗಳ ಬಂದು ಹೋಗುವ ಮಾರ್ಗಗಳು ಯಾವುವು?

ಇ) ಖಾಸಗೀ ಬಸ್ಸುಗಳು ತಮ್ಮ ಪರವಾನಿಗೆ ಪ್ರಕಾರ ಸಂಚರಿಸುತ್ತಿವೆಯೇ, ಇದರಿಂದ ಸರ್ಕಾರಿ ಬಸ್ಸುಗಳಿಗೆ ಅನಾನುಕೂಲವಾಗುವುದಿಲ್ಲವೇ?

ಈ) ಈ ರೀತಿ ಸಂಚರಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಪರವಾನಿಗೆ ವಿರುದ್ಧವಾಗಿ ಸಂಚರಿಸುವ ಖಾಸಗಿ ಬಸ್ಸು ಮಾಲೀಕರಿಗೆ ಯಾವ ದಂಡ ವಿಧಿಸಲಾಗಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):

ಅ) 7 (ಏಳು).

ಆ) 1) ಹರಿಹರದಿಂದ ಬೆಂಗಳೂರು ಮತ್ತು ವಾಪಸ್ಸು (ವಯಾ ದಾವಣಗೆರೆ, ಹೊಳಲ್ಕೆರೆ, ಹೊಸದುರ್ಗ, ಸಿ.ಎನ್.ಹಳ್ಳಿ, ಕೆ.ಬಿ.ಕ್ರಾಸ್, ತುಮಕೂರು, ನೆಲಮಂಗಲ, ಸೊಂಡೆಕೊಪ್ಪ).

2) ಬೆಂಗಳೂರಿನಿಂದ ದಾವಣಗೆರೆ ಮತ್ತು ವಾಪಸ್ಸು (ವಯಾ ಶಿವಕೋಟೆ, ದೊಡ್ಡಬೆಳವಂಗಲ, ಉರ್ಕಿಗೆರೆ, ತುಮಕೂರು, ಶಿರಾ, ಮನ್ಕಲ್, ಬಬ್ಬೂರು, ಹಿರಿಯೂರು, ಪಾಣಿವಿಲಾಸಪುರ, ಹೊಸದುರ್ಗ, ಹೊಳಲ್ಕೆರೆ) (ಮುಖ್ಯ ಸ್ಥಳಗಳನ್ನು ಮಾತ್ರ ನಮೂದಿಸಿದೆ)